ಪಿಡಬ್ಲ್ಯೂ-1

**ದಿನಾಂಕ 19.01.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ರವರ ಪರ ಶ್ರೀ ಎನ್.ಎಂ.ಜಿ.. ರವರಿಂದಃ

ನನ್ನ ಅಕ್ಕ ಜಯಮ್ಮನನ್ನು ನಮ್ಮ ಸ್ವಗ್ರಾಮ ಅರಳಕುಪ್ಪೆಗೆ ಮದುವೆ ಮಾಡಿಕೊಡಲಾಗಿದೆ. ನನ್ನ ಅಕ್ಕ ಜಯಮ್ಮ ಮರಣ ಹೊಂದಿ ಸುಮಾರು 18 ವರ್ಷವಾಗಿದೆ. ನನ್ನ ಅಕ್ಕನಿಗೆ ಇಬ್ಬರು ಮಕ್ಕಳು, ಮಹದೇವ ಮತ್ತು ವೆಂಕಟೇಶ. ನನ್ನ ಅಕ್ಕನನ್ನು ನಮ್ಮ ತಂದೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ. ನನ್ನ ತಂದೆ ಮರಣ ಹೊಂದಿದ ಸಮಯದಲ್ಲಿ ನನಗೆ ಸುಮಾರು 30 ವರ್ಷವಾಗಿತ್ತು. ನನ್ನ ತಂದೆ ಬದುಕಿದ್ದ ಸಮಯದಲ್ಲಿ ಅವರಿಗೆ ಸರ್ಕಾರದಿಂದ ಮನೆ ಮಂಜೂರು ಮಾಡಲಾಗಿತ್ತು. ಸದರಿ ಮನೆಯು ನನ್ನ ತಂದೆಯಾದ ಬೋರೆಗೌಡ ಬಿನ್ ಪುಟ್ಟೇಗೌಡರ ಹೆಸರಿಗೆ ದಾಖಲಾಗಿತ್ತು. ಸದರಿ ಸ್ವತ್ತು ಈಗ ಇರುವುದಿಲ್ಲ. ಸದರಿ ನನ್ನ ತಂದೆಗೆ ಮಂಜೂರಾದ ಮನೆಯನ್ನು ನಾನು ಮತ್ತು ಪ್ರತಿವಾದಿ ಸೇರಿ ಹೈಯಾದ್ಸಾಬ್ ಮಗ ಖಾದರ್ ಸಾಬ್ ರವರಿಗೆ ಮಾರಾಟ ಮಾಡಿದ್ದೇವೆಂದರೆ ಸರಿ. ಸದರಿ ಮಾರಾಟ ಮಾಡಿದ ಬಗ್ಗೆ ದಾಖಲಾತಿಗಳು ಇವೆ ಎಂದರೆ ಸರಿಯಲ್ಲ.

-----------------------------ನನ್ನ ತಂದೆ ಆರೋಗ್ಯ ಚನ್ನಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದರೆ ಸತ್ಯ ಗೊತ್ತಾಗುತ್ತದೆಂಬ ಕಾರಣದಿಂದ ಸುಳ್ಳು ಅಧಿಕಾರ ಪತ್ರ ಪಡೆದು ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕ್ರಯಪತ್ರ ಬರೆದುಕೊಡುವ ಕಾಲದಲ್ಲಿ ನಾನು ಹಾಜರಿದ್ದೇನಾ ಎಂದರೆ ಸಾಕ್ಷಿಯು ಹಾಜರು ಇದ್ದೆ ಎಂದು ನುಡಿಯುತ್ತಾರೆ. ನಿಪಿ-9 ನ್ನು ಬರೆಸಿಕೊಡುವುದಕ್ಕಿಂತ ಒಂದು ವಾರ ಮುಂಚೆ ಕ್ರಯದ ವ್ಯವಹಾರ ನಡೆದಿತ್ತು. ಆ ಸಮಯದಲ್ಲಿ ನಮ್ಮ ತಂದೆ ಹಾಜರಿದ್ದರು, ನಾನು ಹಾಜರಿರಲಿಲ್ಲ. ನಿಪಿ-9 ರಲ್ಲಿ ವಿಸ್ತೀರ್ಣ ತಪ್ಪಾಗಿ ನಮೂದು ಆದ ಕುರಿತು ದಿಃ 28.03.2010 ನೇ ಇಸವಿಯಲ್ಲಿ ಗೊತ್ತಾಗಿರುತ್ತದೆ. ನಾನು ನಿಪಿ-9 ರಲ್ಲಿ ವಿಸ್ತೀರ್ಣ ತಪ್ಪಾದ ಕುರಿತು ನೊಂದಣಿ ಅಧಿಕಾರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ವಿಸ್ತೀರ್ಣ ತಪ್ಪಾಗಿ ನಮೂದು ಆದ ಕಾರಣ ನೊಂದಣಿ ಕಛೇರಿ ಸಿಬ್ಬಂದಿ ವರ್ಗದವರ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲವೆಂದರೆ ಸರಿ. ನಾವು ಪ್ರತಿವಾದಿಗೆ ನಿಪಿ-9 ರ ಪ್ರಕಾರ 20 ಗುಂಟೆ ಮಾರಾಟ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ನಾವು 1 ಎಕರೆ ಮಾತ್ರ ಮಾರಾಟಮಾಡಿರುತ್ತೇವೆಂದು ನುಡಿಯುತ್ತಾರೆ. ನಾವು ನಿಪಿ-9 ರ ಪ್ರಕಾರ 2 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಋಣಭಾರ ಪ್ರಮಾಣಪತ್ರದಲ್ಲಿ ಒಂದು ಎಕರೆ ತಪ್ಪಾಗಿ ನಮೂದು ಆಗಿರುವುದನ್ನು ದುರುಪಯೋಗ ಪಡಿಸಿಕೊಂಡು ಒಂದು ಎಕರೆ ಮಾತ್ರ ಮಾರಾಟ ಮಾಡಿರುತ್ತೇವೆಂದು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಿಪಿ-9 ರ ಸಾಕ್ಷಿದಾರರಿಗೂ ನಮಗೂ ಯಾವುದೇ ವೈಮನಸ್ಸು ಇಲ್ಲವೆಂದರೆ ಸರಿ.

ನಾನು ನಿಪಿ-15 ರಲ್ಲಿ ಬರೆದಿರುವ ಆಗೆ 2004 ರಲ್ಲಿ ವಿಸ್ತೀರ್ಣ ತಪ್ಪಾಗಿ ನಮೂದಾದ ಕುರಿತು

ಉಪತಹಶಿಲ್ದಾರವರಿಗೆ ಅರ್ಜಿ ಸಲ್ಲಿಸಿರುತ್ತೇನೆಂದು ಬರೆದಿರುತ್ತೇನೆಂದರೆ ಸರಿ. ನನಗೆ 2004 ನೇ ಇಸವಿಯ ಪೂರ್ವದಿಂದಲೂ ನಿಪಿ-9 ರಲ್ಲಿ ವಿಸ್ತೀರ್ಣ ತಪ್ಪಾಗಿರುವ ವಿಚಾರದ ಕುರಿತು ಮಾಹಿತಿ ಇತ್ತಾ ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ವಿಸ್ತೀರ್ಣ ತಪ್ಪಾದ ಕುರಿತು ನಾನು ನೊಂದಣಿ ಕಛೇರಿ ಸಿಬ್ಬಂದಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ.ಓ.ಹೇ.ಸ.ಇದೆ.**

2 ನೇ ಅಪರ **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**